ಸೂಪ್ ಕುಡಿಯುವಂತಿಲ್ಲ. ಮೂರು ನಾಲ್ಕು ಬಾರಿ ಸಿಪ್ ಮಾಡುತ್ತೇನೆ ಅಷ್ಟೇ ಎಂದೆ. ನಿನ್ನ ಹೃದಯ ಬದಲಾಗಿದೆ. ಈಗ ಹೆಚ್ಚಿನ ದ್ರವ ಪದಾರ್ಥ ಸೇವಿಸಬೇಕು ಅಂದರು. ಖುಷಿಯಿಂದ ಕುಡಿದೆ. ಮೂರೇ ದಿನಗಳಲ್ಲಿ ಓಡಾಡಲು ಶುರುಮಾಡಿದೆ. ಐದನೇ ದಿನಕ್ಕೆ ವೈದ್ಯರ ಜೊತೆ ಸೇರಿ ಹಾಡಿದೆ. ಹದಿನೈದನೇ ದಿನಕ್ಕೆ ಬೆಂಗಳೂರಿಗೆ ಮರಳಿದೆ. ಹೊಸ ಹೃದಯ ನವಪಲ್ಲವಿ ಹಾಡತೊಡಗಿತ್ತು.

ಆಗ ಶಸ್ತ್ರಚಿಕಿತ್ಸೆಗೆ ಅಂದಾಜು 5 ಲಕ್ಷ ರೂಪಾಯಿ ಖರ್ಚಾಗಿತ್ತು. ಅದನ್ನು ರಿಯಾಯಿತಿ ದರದಲ್ಲೇ ಮಾಡಿದ್ದರು. ಅದಕ್ಕೂ ಮೊದಲು ನಾಲ್ಕು ವರ್ಷ ಹೃದ್ರೋಗ ಚಿಕಿತ್ಸೆಗೆ ಅಪಾರ ಹಣವನ್ನು ಮನೆಯವರು ಖರ್ಚು ಮಾಡಿದ್ದರು. ಮರು ಜನ್ಮ ಪಡೆದ ನನಗೆ ದಾನಿಯ ಹೃದಯವನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಇತ್ತು. ಬೆಂಗಳೂರಿಗೆ ಬಂದ ಮೇಲೆ ಸೈಕಲ್ ತುಳಿಯಲು, ಆಡಲು ಶುರುಮಾಡಿದೆ.

ಅಂಗಾಂಗ ಕಸಿ ಆದಮೇಲೆ ಮಾತ್ರೆಯನ್ನು ಜೀವನಪರ್ಯಂತ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಂಜೇರುವ ಅಪಾಯ ಹೆಚ್ಚಿರುತ್ತದೆ. ಕಸಿಯಾದ ಅಂಗ ಸರಿಯಾಗಿ ಸ್ಪಂದಿಸದೆ ರಿಜೆಕ್ಷನ್ ಕೂಡ ಆಗಬಹುದು. ಮುನ್ನೆಚ್ಚರಿಕೆಯ ಚಿಕಿತ್ಸೆಗೆ ತಿಂಗಳಿಗೆ 10ರಿಂದ 15 ಸಾವಿರ ಖರ್ಚು ತಗಲುತ್ತದೆ. ಔಷಧೋಪಚಾರವನ್ನು ಸಮರ್ಪಕವಾಗಿ ಮಾಡುತ್ತಾ ಮೂರೇ ತಿಂಗಳಿಗೆ ಮ್ಯಾರಥಾನ್, ಸ್ಕೈ ಡೈವ್ ಆರಂಭಿಸಿದೆ.

## ‘ರೀನಾ ರಾಜು ಫೌಂಡೇಶನ್’ ಹುಟ್ಟು

ಆಗ ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಪಶ್ಚಿಮ ಬಂಗಾಳದ ಒಬ್ಬ ರೋಗಿಗೆ ಹೃದಯಕಸಿ ಮಾಡಿದ್ದರು. ಸ್ವಲ್ಪ ದಿನಗಳಲ್ಲಿ ಅವರು ತೀರಿಹೋದರು. ಏಕೆಂದು ವೈದ್ಯರ ಬಳಿ ವಿಚಾರಿಸಿದಾಗ, ಅವರು ಸಮರ್ಪಕವಾಗಿ ಔಷಧಿ ತೆಗೆದುಕೊಳ್ಳುತ್ತಿರಲಿಲ್ಲ, ಔಷಧಕ್ಕೆ ಅವರ ಬಳಿ ಹಣವಿರಲಿಲ್ಲ ಎಂಬ ಸುದ್ದಿ ಕೇಳಿ ವಿಚಲಿತಳಾದೆ.



ಅಂಗಾಂಗ ಕಸಿಗೆ ಒಳಪಟ್ಟವರಿಗಾಗಿ ಏರ್ಪಡಿಸಿದ್ದ ಕ್ರೀಡಾಕೂಟದಲ್ಲಿ ರೀನಾ

### ಕರ್ಮವೀರ ಪುರಸ್ಕಾರ

ವಿಶ್ವಸಂಸ್ಥೆಯ ಸಹಭಾಗಿತ್ವದಲ್ಲಿ ಸ್ಥಾಪಿತವಾದ ‘ಐಕಾಂಗೊ’ (Icongo) ಎನ್‌ಜಿಒಗಳ ಅಂತರರಾಷ್ಟ್ರೀಯ ಒಕ್ಕೂಟ ‘ಕರ್ಮವೀರ ಚಕ್ರ’ ಪ್ರಶಸ್ತಿಯನ್ನು 2004ರಲ್ಲಿ ಸ್ಥಾಪಿಸಿದೆ. ಆರೋಗ್ಯ, ಮಾನವ ಹಕ್ಕುಗಳು, ಕೃಷಿ, ಪರಿಸರ, ಪ್ರಾಣಿ ಸಂರಕ್ಷಣೆ, ಶಾಂತಿ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಅಪೂರ್ವ ಕೆಲಸ ಮಾಡಿದವರಿಗೆ ಈ ಗೌರವ ನೀಡುತ್ತಿದ್ದಾರೆ. 2023–24ರಲ್ಲಿ ರೀನಾ ರಾಜು ಅವರಿಗೆ ಈ ಪುರಸ್ಕಾರ ಲಭಿಸಿದೆ.



ರೀನಾ ಸ್ಕೈ ಡೈವ್

ಮರುಜನ್ಮ ಪಡೆದರೂ ಜೀವ ಪೋಷಣೆಯಲ್ಲಿ ಆದ ವೈಫಲ್ಯ ಕಾಡಲು ಆರಂಭಿಸಿತು. ಏನಾದರೂ ಮಾಡಬೇಕೆನ್ನಿಸಿತು. ಆಗ ರೂಪುಗೊಂಡಿದ್ದು ‘ರೀನಾ ರಾಜು ಫೌಂಡೇಶನ್’. ಚಾರಿಟೆಬಲ್ ಟ್ರಸ್ಟ್ ಎಂದು ಕರ್ನಾಟಕದಲ್ಲಿ ನೋಂದಣಿ ಮಾಡಿಸಿ ದೇಶವ್ಯಾಪಿ ಕೆಲಸ ಮಾಡುತ್ತಿದ್ದೇವೆ. ಸ್ವಯಂ ಸೇವಕರಿದ್ದಾರೆ. ಯಾರಿಗೂ ಸಂಭಾವನೆ ಇಲ್ಲ, ನಮ್ಮ ಸೇವೆಗೆ ಯಾವ ಶುಲ್ಕವನ್ನೂ ತೆಗೆದುಕೊಳ್ಳುವುದಿಲ್ಲ.

ನಮ್ಮ ಫೌಂಡೇಶನ್ ಅಂಗದಾನದ ಬಗ್ಗೆ ತಿಳಿವಳಿಕೆ ನೀಡುತ್ತದೆ. ಅಂಗಾಂಗ ದಾನದ ಪೂರ್ವ ಮತ್ತು ನಂತರದ ದಿನಗಳಲ್ಲಿ ರೋಗಿಗೆ ಆಪ್ತಸಮಾಲೋಚನೆ ಮಾಡುತ್ತೇವೆ. ಔಷಧ ತೆಗೆದುಕೊಳ್ಳಲು ಕಷ್ಟ ಇರುವವರಿಗೆ ಹಣವನ್ನು ಸಂಗ್ರಹಿಸಿ ಕೊಡುವ ವ್ಯವಸ್ಥೆಯನ್ನೂ ಮಾಡುತ್ತೇವೆ.

ಎಲ್ಲರಿಗೂ ನೆರವು ನೀಡಲು ಸಾಧ್ಯವಿಲ್ಲ. ಕುಟುಂಬದಲ್ಲಿ ದುಡಿಯುವ ವ್ಯಕ್ತಿ ಆಗಿದ್ದರೆ, ರೋಗಿಯ ಮನೆಯವರು ತುಂಬ ಬಡವರಾಗಿದ್ದರೆ ಸಹಾಯ ಮಾಡುತ್ತೇವೆ. ಔಷಧದ ಕೊರತೆಯಿಂದ ಸಾಯಬಾರದು ಎನ್ನುವುದು ನನ್ನ ಕಾಳಜಿ.

## ದಾನ ಪಡೆದ ಹೃದಯ ಗಾಸಿಗೊಂಡಿತು

ರಾಜ್ಯದಲ್ಲಿ ಹೃದಯ ಕಸಿ ಮಾಡಿಕೊಂಡ ಮೊದಲ ಮಹಿಳೆ ನಾನು. ಅದಾಗಿ 8 ವರ್ಷಕ್ಕೆ, ಅಂದರೆ 2017ರ ವೇಳೆಗೆ ಏನೋ ಹೆಚ್ಚು ಕಡಿಮೆಯಾಗಿ ನನ್ನ ದಾನಿಯ ಹೃದಯಕ್ಕೆ ಹಾನಿಯಾಯಿತು. ನಿಧಾನಕ್ಕೆ ಅದರ ಕಾರ್ಯಕ್ಷಮತೆ ಕುಗ್ಗುತ್ತಿರುವುದು ಗೊತ್ತಾಯಿತು. ಅದಕ್ಕೆ ಚೈತನ್ಯ ತುಂಬಲು ಬೇರೆ ಚಿಕಿತ್ಸೆ ಬೇಕಾಯಿತು. ಅದೆಲ್ಲ ಬೆಂಗಳೂರಿನಲ್ಲೇ ಮಾಡಿಸುತ್ತಿದ್ದೆ. ಆ ಚಿಕಿತ್ಸೆಯಿಂದ ಸರಿದಾರಿಗೆ ಬರಲು ಒಪ್ಪದ ಹೃದಯ ತನ್ನ ಸೋಲನ್ನು ಒಪ್ಪಿಕೊಂಡಿತು. ಆಗ ನಮಗೆ ಡಾ. ಚೆರಿಯನ್ ನೆನಪಾದರು. ನಮ್ಮ ಕುಟುಂಬದವರು ಚೆನ್ನೈಗೆ ಹೋಗಲು ನಿರ್ಧರಿಸಿದರು. ನಮಗೆ ಏರ್ ಆ್ಯಂಬುಲೆನ್ಸ್ ಸಿಗಲಿಲ್ಲ. ವೈದ್ಯರು 6 ಗಂಟೆಯ ಒಳಗೆ ಆಸ್ಪತ್ರೆ ಮುಟ್ಟಬೇಕು ಎಂದಿದ್ದರು. ನಿಗದಿತ ಅವಧಿಗೆ ರಸ್ತೆ ಮಾರ್ಗದಲ್ಲೇ ಚೆನ್ನೈಗೆ ತಲುಪಿದೆ. ಸ್ವಲ್ಪ ಹೊತ್ತಿನಲ್ಲೇ ಹೃದಯಸ್ತಂಭನ ಆಯಿತು. ನನಗೆ ಯಂತ್ರಗಳನ್ನು ಅಳವಡಿಸಿ ಕೃತಕ ಹೃದಯ ಕ್ರಿಯೆ ಮಾಡಿಸಿದ್ದಾರೆ. ಮತ್ತೊಮ್ಮೆ ಸಾವಿಗೆ ಕಾಯುತ್ತಿದ್ದೆ. ನನಗೆ ಪ್ರೀತಿ ಧಾರೆ ಎರೆದ ಮನಸುಗಳಿಗೆ ಕೃತಜ್ಞತೆಯನ್ನು ಬರೆದು ತಿಳಿಸಿದೆ. ಅದರಲ್ಲಿ ಬದುಕಿನ ಭರವಸೆ ಇಲ್ಲ; ಆದರೂ ಬದುಕಲು ಹೋರಾಡುತ್ತೇನೆ ಎಂದಿದ್ದೆ.

ನನ್ನ ಅದೃಷ್ಟಕ್ಕೆ ಮೂರೇ ದಿನಕ್ಕೆ ಹೃದಯ ಸಿಕ್ಕಿತು. ನನಗೆ ಎಚ್ಚರ ಆದಾಗ ನಮ್ಮ ಪೋಷಕರು, ‘ನೀನು ಶೇ.100 ಬದುಕುವೆ. ನಿನಗೆ ಎರಡನೇ ಹೃದಯ ಕಸಿ ಆಗಿದೆ’ ಎಂದರು. ದಾನಿಯ ಎರಡನೇ ಹೃದಯ ಬಡಿತ ಆರಂಭವಾಗಿತ್ತು. ಆಸ್ಪತ್ರೆಯ ಸಿಬ್ಬಂದಿಯೇ ನನಗೆ ರಕ್ತದಾನ ಮಾಡಿದ್ದರು. ಚೇತರಿಸಿಕೊಳ್ಳಲು ಒಂದು ತಿಂಗಳು ಬೇಕಾಯಿತು. ಮತ್ತೆ ಸೈಕ್ಲಿಂಗ್, ಆಟೋಟ ಆರಂಭಿಸಿದೆ. ಅದಾಗಿ ಎಂಟು ವರ್ಷ.

2017ರಲ್ಲಿ ಸ್ಪೇನ್‌ನಲ್ಲಿ ಅಂಗಾಂಗ ಕಸಿಗೆ ಒಳಪಟ್ಟವರಿಗಾಗಿ ಏರ್ಪಡಿಸಿದ್ದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದೆ. ಮಹಿಳಾ ಮ್ಯಾರಥಾನ್ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದಿದ್ದೆ.

ನನ್ನ ಬದುಕಿಗೆ ಮತ್ತೆ ಮತ್ತೆ ಅವಕಾಶ ಸಿಕ್ಕಿರುವುದು ದೇವರ ಕೃಪೆ ಎಂದೇ ಭಾವಿಸಿದ್ದೇನೆ. ಆ ಜೀವನವನ್ನು ಜನಸೇವೆಗಾಗಿ ಮುಡುಪಾಗಿ ಇಡುತ್ತೇನೆ. ಸಂಪಾದಿಸಿ ಇಡುವುದೆಲ್ಲವೂ ವ್ಯರ್ಥ ಅಂತ ಅನ್ನಿಸಿದೆ. ನೊಂದ ಮತ್ತೊಂದು ಜೀವಕ್ಕೆ ಮಿಡಿಯಬೇಕು, ಇರುವಷ್ಟು ದಿನ ಖುಷಿಯಿಂದ ಕಾಲ ಕಳೆಯಬೇಕು – ಆ ನಿಟ್ಟಿನಲ್ಲಿಯೇ ನಾನು ಬದುಕಿದ್ದೇನೆ.

ರೀನಾ ಅವರ ‘Light A Life Reena Raju Foundation’ ಸಂಪರ್ಕ: ಫೇಸ್‌ಬುಕ್– facebook.com/ ReenaRajuFoundation
ಇ–ಮೇಲ್: reenalightalife@gmail.com
ಪ್ರತಿಕ್ರಿಯಿಸಿ: feedback@sudha.co.in